



## ರೈತಮಹಿಳೆಯ ಆಸಕ್ತಿ



ಧರ್ಮಸ್ಥಳದ ಬಳಿಯಲ್ಲಿ ಅಡಿಕೆ ತೋಟದ ಕೆಲಸದ ಜತೆಗೆ ಗೃಹವಾರ್ತೆಯಲ್ಲಿ ತೊಡಗಿರುವ ಆಶಾ ಎನ್ನುವವರಿಗೆ ಖಾದ್ಯ ತಯಾರಿಯಲ್ಲೂ ವಿಶೇಷ ಆಸಕ್ತಿ. ತಮ್ಮದೇ ಎನ್ನುವ ಸಿಗ್ನೇಚರ್ ಡಿಶ್ ಎಂದೇನೂ ಇಲ್ಲ, ತಲತಲಾಂತರದಿಂದ ಬಂದ ಕಲೆಯಷ್ಟೆ ಇದು ಎಂದು ನಮ್ರವಾಗಿ ಹೇಳುವ ಅವರು ಕೋವಿಡ್ ಕಾಲದಲ್ಲಿಯೇ ತಮ್ಮದೇ ಆಹಾರ ಖಾದ್ಯಗಳ 'ಆಶಾಸ್ ನಳಪಾಕ' (Asha's Nalapaka) ಫೇಸ್‌ಬುಕ್ ಪುಟವನ್ನು ಪ್ರಾರಂಭಿಸಿದರು. ಅದಕ್ಕೂ ಮೊದಲು ಅವರು ವಿವಿಧ ಆಹಾರ ಕುರಿತ ಫೇಸ್‌ಬುಕ್ ಸಾಮೂಹಿಕ ಪುಟಗಳನ್ನು ತಮಗೆ ತಿಳಿದ ಖಾದ್ಯಗಳನ್ನು ಮಾಡುವ ಬಗೆಯ ಕುರಿತು ಬರೆದು, ಪೋಸ್ಟ್ ಮಾಡುತ್ತಿದ್ದರು. ಒಂದು ವರ್ಷದಲ್ಲಿ ಮೂರು ಸಾವಿರ ಮಂದಿ ತಮ್ಮ ಫೇಸ್‌ಬುಕ್ ಪುಟವನ್ನು ಫಾಲೋ ಮಾಡುತ್ತಿರುವುದು ಅವರಿಗೆ ಖುಷಿ ಕೊಟ್ಟಿದೆ. ಯೂಟ್ಯೂಬ್ ಚಾನೆಲ್ ಶುರುಮಾಡುವಷ್ಟು ಪುರುಸೊತ್ತು ತಮಗಿಲ್ಲ ಎನ್ನುವ ಅವರಿಗೆ ಹವ್ಯಕ ಆಹಾರ ಸಂಸ್ಕೃತಿಯ ಕುರಿತೇ ಒಂದು ಪುಸ್ತಕ ಬರೆಯಬೇಕೆಂಬ ಬಯಕೆ ಹುಟ್ಟಿದೆ.

ಮುಂಬೈ, ಬೆಂಗಳೂರು, ಉಡುಪಿ, ಮೈಸೂರಿನಲ್ಲಿ ಹೆಬ್ಬಾರ್ಸ್ ಕಿಚನ್ ವಿಡಿಯೊಗಳನ್ನು ಇಷ್ಟು ಜನಪ್ರಿಯವಾಗಿಸಿದ ತಂಡದ ಸದಸ್ಯರು ಇದ್ದಾರೆ. ಆಸ್ಟ್ರೇಲಿಯಾದಿಂದಲೇ ತಮ್ಮ ತಂಡದ ಕಾರ್ಯವೈಖರಿಯನ್ನು ಸುದರ್ಶನ್ ಹಾಗೂ ಅರ್ಚನಾ ನಿರ್ದೇಶಿಸುತ್ತಾ ಬಂದಿರುವುದು ಕೂಡ ಹೊಸಕಾಲದ ದೊಡ್ಡ ಸಾಧ್ಯತೆಯೊಂದಕ್ಕೆ ಉದಾಹರಣೆ.

ಪ್ಯಾನಸೋನಿಕ್, ಕೆಂಟ್, ಕ್ಯಾಡ್‌ಬರಿ, ಶಾನ್ ಮಸಾಲಾ ಈ ರೀತಿಯ ಹಲವು ಉತ್ಪನ್ನಗಳು ಇವರ ವಿಡಿಯೊಗಳ ಭಾಗಗಳಾಗಿವೆ. ಇವರು ನೇರವಾಗಿ ಯಾವ ಉತ್ಪನ್ನಗಳ ಕುರಿತೂ ವಿವರಗಳನ್ನು ನೀಡುವುದಿಲ್ಲ. ಮಿಕ್ಸಿ, ವಾಟರ್ ಪ್ಯೂರಿಫೈರ್, ಆಹಾರ ಸಾಮಗ್ರಿಗಳ ರೂಪದಲ್ಲಿ ಇವೆಲ್ಲವನ್ನೂ ವಿಡಿಯೊದಲ್ಲಿ ಬಳಸುತ್ತಾ ಪ್ರಾಯೋಜಕತ್ವದ ಈ ದಾರಿಯನ್ನು ಹಿಡಿದುಕೊಂಡಿದ್ದಾರೆ ಅಥವಾ ಅಂಥದೊಂದು ದಾರಿ ಅವರನ್ನೇ ಹುಡುಕಿಕೊಂಡು ಬಂದಿದೆ.

ಕೋವಿಡ್ ಬಂದಮೇಲೆ ಹೆಬ್ಬಾರ್ಸ್ ಕಿಚನ್ ವಿಡಿಯೊ ವೀಕ್ಷಕರ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದೆ. ಅಂದಾಜು 30 ಲಕ್ಷ ಜನ ಈ ಎರಡು ವರ್ಷಗಳಲ್ಲಿ ಚಾನೆಲ್‌ನ ವಿಡಿಯೊಗಳನ್ನು ನೋಡಿರಬಹುದು ಎಂದು ಸುದರ್ಶನ್ ಹೇಳುತ್ತಾರೆ.

ಮೊದಲಿಗೆ ಉಡುಪಿ, ಮಂಗಳೂರು ತಿನಿಸುಗಳಿಂದ ಶುರುವಾದ ಯೂಟ್ಯೂಬ್ ಆಹಾರ ಪಯಣ ಆಮೇಲೆ ವಿಸ್ತರಿಸುತ್ತಾ ಹೋಗಿ, ಈಗ ದೇಶದ ಹಲವು ಬಗೆಯ ತಿನಿಸು–ಖಾದ್ಯಗಳ ತಯಾರಿಯ ಬಗೆಯನ್ನು ವಿವರಿಸುವವರೆಗೆ ಬೆಳೆದಿದೆ.

'ಸೋಮವಾರದಿಂದ ಶುಕ್ರವಾರದವರೆಗೆ 10 ನಿಮಿಷಗಳ ತಿಂಡಿ' ಎನ್ನುವ ಪ್ರಾತ್ಯಕ್ಷಿಕೆಯಿಂದ ಹಿಡಿದು ರಸಮಲಾಯಿ, ಪಾವ್ ಭಾಜಿ, ಥ್ರೀ ವೇ ತವಾ ಸ್ಯಾಂಡ್‌ವಿಚ್, ಡಾಭಾ ಶೈಲಿಯ ಪನ್ನೀರ್ ಕಡಾಯಿ, ಆಲೂ ಟಿಕ್ಕಿ ಬರ್ಗರ್, ವೆಜ್ ಮ್ಯಾಮೋಸ್, ತಂದೂರಿ ರೋಟಿ ತರಹದ ಖಾದ್ಯ ವೈವಿಧ್ಯ; ಸೇಬಿನ ಹಲ್ವಾ, ಗುಲಾಬ್ ಜಾಮೂನ್, ರಸಮಲಾಯಿ ರೀತಿಯ ಸಿಹಿತಿನಿಸುಗಳು, ಮಿಲ್ಕ್‌ಶೇಕ್‌ಗಳು ಎಲ್ಲವನ್ನೂ ಮಾಡುವುದು ಹೇಗೆ ಎಂದು ಹೆಬ್ಬಾರ್ಸ್ ಕಿಚನ್ ತಿಳಿಸಿಕೊಡುತ್ತದೆ. ಆರೋಗ್ಯದ ಹಿತದೃಷ್ಟಿಯಿಂದ ನೋಡುಗರು ಆಯ್ಕೆ ಮಾಡಿಕೊಳ್ಳಬಹುದಾದ ತಿನಿಸುಗಳನ್ನು ಕೆಲವು ವಿಡಿಯೊಗಳ ಶೀರ್ಷಿಕೆಗಳಲ್ಲೇ ಕಾಣಬಹುದಾಗಿದೆ.

ಸುದರ್ಶನ್ ಈಗ ಸ್ವಂತ ಕನ್ಸಲ್ಟಿಂಗ್ ಕಂಪನಿ ನಡೆಸುವುದರ ಜತೆಗೆ ವ್ರತದಂತೆ ಆಹಾರದ ವಿಡಿಯೊಗಳನ್ನು ಹಾಕುವ ಸಣ್ಣ ಉದ್ಯಮವನ್ನೂ ನಡೆಸಿಕೊಂಡು ಹೋಗುತ್ತಿದ್ದಾರೆ. ಇಷ್ಟೆಲ್ಲ ಖಾದ್ಯಗಳನ್ನು ತಯಾರಿಸುತ್ತಾ ವಿದೇಶಿ ನೆಲದಲ್ಲೂ ದೇಸಿ ಆಹಾರ ಸಂಸ್ಕೃತಿಯನ್ನು ಉಸಿರಾಡುತ್ತಿರುವ ಅರ್ಚನಾ ಅವರ ಮಡಿಲಲ್ಲಿ ಈಗ ಒಂದು ವರ್ಷ ನಾಲ್ಕು ತಿಂಗಳ ಮಗುವಿದೆ. ಹೊಟ್ಟೆಯಲ್ಲಿ ಮಗು ಇದ್ದಾಗಲಾಗಲೀ, ಬಾಣಂತನದ ಸಮಯದಲ್ಲಿಯಾಗಲೀ, ಈಗ ಮಗುವಿನ ಲಾಲನೆ–ಪಾಲನೆಗೆ ಸಮಯ ಮೀಸಲಿಡಬೇಕಾದಾಗಲಾಗಲೀ 'ಹೆಬ್ಬಾರ್ಸ್ ಕಿಚನ್' ಸದ್ದು ಮಾಡದೇ ಇದ್ದುದೇ ಇಲ್ಲ. ಸುದರ್ಶನ್ ಕೂಡ ಜೇಸನ್ ಹೇಳಿದ ಮಾತನ್ನೇ ಅಲ್ಲವೇ ಸಾಕಾರಗೊಳಿಸಿರುವುದು – 'ಆಹಾರಕ್ಕೆ ಗಡಿಯ ಹಂಗಿಲ್ಲ.'

ಪ್ರತಿಕ್ರಿಯಿಸಿ: feedback@sudha.co.in